**ಕರ್ನಾಟಕ ಸರ್ಕಾರ**
**(ಕೃಷಿ ಇಲಾಖೆ)**

ಸಂ: ಕೃವಾವಿ-1/16/ಕೃ.ಪಂ.ಪ್ರ.ಕಾ/2023-24

ಕೃಷಿ ಆಯುಕ್ತಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು
ದಿನಾಂಕ: 22.06.2023

**ಸುತ್ತೋಲೆ**

ವಿಷಯ: 2023-24 ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ: AGRI/108/AML/2023, ಬೆಂಗಳೂರು, ದಿ: 03.06.2023
2. ಸರ್ಕಾರಿ ಆದೇಶ ಸಂಖ್ಯೆ:AGRI-AML-113/2022, ಬೆಂಗಳೂರು, ದಿ:11.04.2022
3. ಸರ್ಕಾರಿ ಆದೇಶ ಸಂಖ್ಯೆ:AGRI-AML-120/2021, ಬೆಂಗಳೂರು, ದಿ:31.07.2021

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-1ರ ಸರ್ಕಾರಿ ಆದೇಶದನ್ವಯ, 2023-24ನೇ ಸಾಲಿನಲ್ಲಿ ಕೃಷಿ ಪಂಡಿತ ಪ್ರಶಸ್ತಿ ಕಾರ್ಯಕ್ರಮವನ್ನು ಮುಂದುವರಿಸಲಾಗಿರುತ್ತದೆ. (ಕೃಷಿ ಆಯುಕ್ತಾಲಯ ಯೋಜನೆ, ಪೂರಕ ವೆಚ್ಚಗಳು, ಕೃಷಿ ಪ್ರಶಸ್ತಿ/ಕೃಷಿ ಪಂಡಿತ ಪ್ರಶಸ್ತಿ, ಲೆಕ್ಕ ಶೀರ್ಷಿಕೆ: 2401-00-001-1-01, ಉಶಿ: 015)

ಕೃಷಿಯಲ್ಲಿ ರೈತ ಮಹಿಳೆಯರನ್ನು ಪ್ರೋತ್ಸಾಹಿಸುವ ಮತ್ತು ಕೃಷಿಯತ್ತ ಆಕರ್ಷಿಸಲು ಉಲ್ಲೇಖ(2)ರ ಸರ್ಕಾರಿ ಆದೇಶದನ್ವಯ, 2022-23ನೇ ಸಾಲಿನಿಂದ ಪ್ರತ್ಯೇಕವಾಗಿ ರೈತ ಮಹಿಳೆಯರಿಗೆ ಕೃಷಿ ಪ್ರಶಸ್ತಿ ಮತ್ತು ಕೃಷಿ ಪಂಡಿತ ಪ್ರಶಸ್ತಿಯನ್ನು ನೀಡಲು ಕ್ರಮವಹಿಸಲಾಗಿದೆ ಹಾಗೂ ಇದನ್ನು 2023-24ನೇ ಸಾಲಿನಲ್ಲಿ ಮುಂದುವರಿಸಲಾಗಿದೆ.

ಈ ಹಿನ್ನೆಲೆಯಲ್ಲಿ, 2023-24ನೇ ಸಾಲಿಗೆ ಅನ್ವಯವಾಗುವಂತೆ ಕೃಷಿ ಪಂಡಿತ ಪ್ರಶಸ್ತಿಗೆ ರಾಜ್ಯದ ಆಸಕ್ತ ರೈತ ಮತ್ತು ರೈತ ಮಹಿಳೆಯರಿಂದ ಪ್ರತ್ಯೇಕವಾಗಿ ಉಲ್ಲೇಖ-3ರ ಸರ್ಕಾರದ ಆದೇಶದ ಅನುಬಂಧ-1ಎ ರಲ್ಲಿ ನೀಡಲಾಗಿರುವ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಪಡೆಯುವುದು.

ಉಲ್ಲೇಖ-3ರ ಸರ್ಕಾರಿ ಆದೇಶದ ಅನುಬಂಧ-1ರಂತೆ ಕೃಷಿ ಪಂಡಿತ ಪ್ರಶಸ್ತಿ ಮಾರ್ಗಸೂಚಿಯ ಮಾನದಂಡಗಳನ್ನೇ ಅನುಸರಿಸಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು. (ಪ್ರತಿಗಳನ್ನು ಈಗಾಗಲೇ ಎಲ್ಲಾ ಜಿಲ್ಲೆಗಳಿಗೆ ಕಳುಹಿಸಲಾಗಿದ್ದು, ಮತ್ತೊಮ್ಮೆ ಸದರಿ ಆದೇಶದ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ)

ರೈತರಿಂದ ಅರ್ಜಿಗಳನ್ನು ಸ್ವೀಕರಿಸಲು ವ್ಯಾಪಕವಾಗಿ ಎಲ್ಲಾ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಕಾರ್ಯ ಕೈಗೊಳ್ಳುವುದು. **ಅರ್ಜಿಗಳನ್ನು ಸಂಬಂಧಪಟ್ಟ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಲ್ಲಿಸಲು ಅಂತಿಮ ದಿನಾಂಕ 24.07.2023 ಆಗಿರುತ್ತದೆ.**

ತಾಲ್ಲೂಕುಗಳಲ್ಲಿ ಸ್ವೀಕೃತವಾಗುವ ಎಲ್ಲಾ ಅರ್ಜಿದಾರರ ಪ್ರಾಥಮಿಕ ಕ್ಷೇತ್ರ ಭೇಟಿಯನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಕೈಗೊಂಡು ಅವರು ಗಮನಿಸಿದ

ಅಂಶಗಳೊಂದಿಗೆ (Observations) ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಕಛೇರಿಗೆ ದಿನಾಂಕ 07.08.2023 ರೊಳಗಾಗಿ ಸಲ್ಲಿಸುವುದು.

ಉಲ್ಲೇಖ-1ರ ಸರ್ಕಾರದ ಆದೇಶದ ಅನುಬಂಧ-1ಬಿ ರಲ್ಲಿ ನೀಡಿರುವಂತೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಪರಿಶೀಲನಾ ಕಾರ್ಯತಂಡವು ತಾಲ್ಲೂಕುಗಳಿಂದ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಕಿರು ಪಟ್ಟಿ (short list) ತಯಾರಿಸಿ ಕೃಷಿ ಪಂಡಿತ ಪ್ರಶಸ್ತಿಗೆ ಯೋಗ್ಯವೆನಿಸುವಂತಹ ಅರ್ಜಿಗಳನ್ನು ಮಾತ್ರ ಶಿಫಾರಸ್ಸಿನೊಂದಿಗೆ ದಿನಾಂಕ 31.08.2023 ರೊಳಗಾಗಿ ಕೇಂದ್ರ ಕಛೇರಿಗೆ ಸಲ್ಲಿಸುವುದು.

**ವಿಶೇಷ ಸೂಚನೆಗಳು:**

- ಅರ್ಜಿ ನಮೂನೆ ಹಾಗೂ ಕ್ಷೇತ್ರ ಭೇಟಿ ಮೌಲ್ಯಮಾಪನ ನಮೂನೆಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.
- ದಿನಾಂಕ: 15.06.2023 ರಂದು ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ರವರ ಅಧ್ಯಕ್ಷತೆಯಲ್ಲಿ ಜರುಗಿದ ರಾಜ್ಯ ಮಟ್ಟದ ಕೃಷಿ ಪ್ರಶಸ್ತಿ ಹಾಗೂ ಕೃಷಿ ಪಂಡಿತ ಪ್ರಶಸ್ತಿ ತೀರ್ಪು ಸಮಿತಿ ಸಭೆಯಲ್ಲಿ ಸಮಿತಿಯ ಅಧ್ಯಕ್ಷರು, 2023-24ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗೆ ತಪ್ಪದೇ ಎಲ್ಲಾ ಜಿಲ್ಲೆಗಳಿಂದ ಪ್ರತ್ಯೇಕವಾಗಿ ರೈತ ಮತ್ತು ರೈತಮಹಿಳೆಯರಿಂದ ಅರ್ಜಿಗಳನ್ನು ನೋಂದಾಯಿಸುವಲ್ಲಿ ಕ್ರಮವಹಿಸಲು ಸೂಚನೆ ನೀಡಿರುವುದರ ಹಿನ್ನಲೆಯಲ್ಲಿ ಸದರಿ ಸೂಚನೆಯನ್ನು ತಪ್ಪದೇ ಪಾಲಿಸುವುದು. ತಪ್ಪಿದಲ್ಲಿ ಆಗುಹೋಗುಗಳಿಗೆ ಸಂಬಂಧಪಟ್ಟ ಹೋಬಳಿ/ತಾಲ್ಲೂಕು/ವಿಭಾಗ/ಜಿಲ್ಲಾ ಮಟ್ಟದ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
- ಕೃಷಿ ಪಂಡಿತ ಪ್ರಶಸ್ತಿ ಕಾರ್ಯಕ್ರಮದ ಬಗ್ಗೆ ಜಿಲ್ಲೆ, ತಾಲ್ಲೂಕು, ಹೋಬಳಿ ಮತ್ತು ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ವಿವಿಧ ಶ್ರವಣ/ದೃಶ್ಯ/ಸಾಮಾಜಿಕ (whats App, Text messages etc.,) ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ಕಾರ್ಯವನ್ನು ಕೈಗೊಳ್ಳಲು ಹಾಗೂ ಸದರಿ ವಿಷಯದ ಕುರಿತು ಸಂಬಂಧಪಟ್ಟ ಎಲ್ಲಾ ರೈತ ಬಾಂಧವರ/ಜನಪ್ರತಿನಿಧಿಗಳ/ಗಣ್ಯ ವ್ಯಕ್ತಿಗಳ ಗಮನಕ್ಕೆ ತರಲು ತಿಳಿಸಿದೆ.

ಕೃಷಿ ನಿರ್ದೇಶಕರು

ಪ್ರತಿಯನ್ನು,

1. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ ಕಳುಹಿಸುತ್ತಾ ಈ ಸುತ್ತೋಲೆಯಲ್ಲಿನ ಅಂಶಗಳನ್ನು ಹಾಗೂ ಕೃಷಿ ಪಂಡಿತ ಪ್ರಶಸ್ತಿ ಮಾರ್ಗಸೂಚಿಗಳನ್ನು ನಿಮ್ಮ ಅಧೀನದಲ್ಲಿ ಬರುವ ಎಲ್ಲಾ ಉಪ ಕೃಷಿ ನಿರ್ದೇಶಕರು/ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು/ಎಲ್ಲಾ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳು/ಸಹಾಯಕ ಕೃಷಿ ಅಧಿಕಾರಿಗಳು & ಸಂಬಂಧಪಟ್ಟ ಎಲ್ಲಾ ಸಿಬ್ಬಂದಿಗಳ ಗಮನಕ್ಕೆ ತರಲು ತಿಳಿಸಿದೆ.
2. ಅಭಿನಂದನೆಗಳೊಂದಿಗೆ ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳ ಸಂಶೋಧನಾ ನಿರ್ದೇಶಕರು ಮತ್ತು ವಿಸ್ತರಣಾ ನಿರ್ದೇಶಕರುಗಳಿಗೆ ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಮಾರ್ಗಸೂಚಿಯ ಪ್ರತಿಯೊಂದಿಗೆ ಕಳುಹಿಸಿದೆ.
3. ಆತ್ಮ ಸಂಯೋಜಕರು, ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

# ಅನುಬಂಧ- 2

## ___________ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿ ಮೌಲ್ಯಮಾಪನ ನಮೂನೆ)

| ರೈತರ ಹೆಸರು & ವಿಳಾಸ: | |
|---|---|

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| 1 | **ಬೆಳೆಗಳ ಪದ್ಧತಿ** | | |
| ಅ | ವಾರ್ಷಿಕವಾಗಿ ಏಕ ಕೃಷಿ ಬೆಳೆ ಬೆಳೆಯುತ್ತಿರುವುದು | 1 | |
| ಆ | ವಾರ್ಷಿಕವಾಗಿ ಎರಡು ಕೃಷಿ ಬೆಳೆ ಬೆಳೆಯುತ್ತಿರುವುದು | 1 | |
| ಇ | ವಾರ್ಷಿಕವಾಗಿ ಮೂರು ಕೃಷಿ ಬೆಳೆ ಬೆಳೆಯುತ್ತಿರುವುದು | 1 | |
| ಈ | ವಾರ್ಷಿಕವಾಗಿ ನಾಲ್ಕು/ ನಾಲ್ಕಕ್ಕಿಂತ ಹೆಚ್ಚು ಕೃಷಿ ಬೆಳೆ ಬೆಳೆಯುತ್ತಿರುವುದು | 1 | |
| | ವಿ.ಸೂ: ವಾರ್ಷಿಕವಾಗಿ ಯಾವುದೇ ರೀತಿಯ ಕೃಷಿ ಬೆಳೆಯನ್ನು ಬೆಳೆಯದಿದ್ದ ಪಕ್ಷದಲ್ಲಿ ಅರ್ಜಿದಾರರ ಪ್ರಸ್ತಾವನೆಯನ್ನು ತಿರಸ್ಕರಿಸುವುದು. | | |

**ಗರಿಷ್ಠ ಅಂಕ : 4 ಪಡೆದ ಅಂಕ :**

| .ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| 2 | **ಸಮಗ್ರ ಕೃಷಿ ಪದ್ಧತಿ (ಕೃಷಿ ಸಂಬಂಧಿತ ಚಟುವಟಿಕೆಗಳು)** | | |
| ಆ | **ತೋಟಗಾರಿಕೆ** | 1 | |
| i | ಹೂ ಬೆಳೆಗಳನ್ನು ಬೆಳೆದಿದ್ದಲ್ಲಿ | 1 | |
| ii | ತರಕಾರಿ ಬೆಳೆಗಳನ್ನು ಬೆಳೆದಿದ್ದಲ್ಲಿ | 1 | |
| iii | ಹಣ್ಣು ಬೆಳೆಗಳನ್ನು ಬೆಳೆದಿದ್ದಲ್ಲಿ | 1 | |
| iv | ಸಾಂಬಾರು ಪದಾರ್ಥದ ಬೆಳೆಗಳನ್ನು ಬೆಳೆದಿದ್ದಲ್ಲಿ | 1 | |
| v | ಬಹುವಾರ್ಷಿಕ (plantation) ಬೆಳೆಗಳನ್ನು ಬೆಳೆದಿದ್ದಲ್ಲಿ | 1 | |
| vi | ಇತರೆ (ಅಲಂಕಾರಿಕ ಸಸ್ಯಗಳು/ ಔಷಧೀಯ ಸಸ್ಯಗಳು ಇತ್ಯಾಧಿ) | 1 | |
| ಆ | **ಪಶುಸಂಗೋಪನೆ** | | |
| i | ಹಸು, ಎಮ್ಮೆ, ಆಡು, ಕುರಿ ಹೊಂದಿದ್ದಲ್ಲಿ | 1 | |
| ii | ಕೋಳಿ, ಮೊಲ, ಹಂದಿ ಇತ್ಯಾದಿ ಹೊಂದಿದ್ದಲ್ಲಿ | 1 | |
| iii | ಮೇವಿನ ಬೆಳೆ ಬೆಳೆಯುತ್ತಿದ್ದಲ್ಲಿ | 1 | |
| ಇ | **ಕೃಷಿ ಅರಣ್ಯ** | | |
| i | ಬದುಗಳ ಮೇಲೆ ಅರಣ್ಯ ಸಸಿಗಳನ್ನು ಬೆಳೆಯುತ್ತಿದ್ದಲ್ಲಿ | 1 | |
| ii | ಅರಣ್ಯ ಸಸಿಗಳನ್ನು ಮಾತ್ರ ಬೆಳೆಯುತ್ತಿದ್ದಲ್ಲಿ | 1 | |
| ಈ | **ಜೇನು ಸಾಕಾಣಿಕೆ** | 1 | |

| | | | |
|---|---|---|---|
| ಉ | ಮೀನುಗಾರಿಕೆ | 1 | |
| ಊ | ರೇಷ್ಮೆ ಕೃಷಿ | 1 | |

ಗರಿಷ್ಠ ಅಂಕ : **15** ಪಡೆದ ಅಂಕ :

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **3** | **ರೈತರ ತಾಕುಗಳಲ್ಲಿ ಸೂಕ್ಷ್ಮ ನೀರಾವರಿ ಅಳವಡಿಸಿರುವ ಕುರಿತು** | | |
| **ಅ.** | **ಇಲ್ಲವಾದಲ್ಲಿ** | **0** | |
| **ಅ** | **ಹೌದಾದಲ್ಲಿ** | | |
| **i** | ಸಹಾಯಧನದಲ್ಲಿ ಪಡೆದಿದ್ದರೆ | **2** | |
| **ii** | ಸ್ವಂತವಾಗಿ ಅಳವಡಿಸಿದಲ್ಲಿ | **3** | |

ಗರಿಷ್ಠ ಅಂಕ : **3** ಪಡೆದ ಅಂಕ :

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| 4 | **ರೈತರ ತಾಕುಗಳಲ್ಲಿ ಸೂಕ್ಷ್ಮ ನೀರಾವರಿ ಪದ್ಧತಿಗಳ ಅಳವಡಿಕೆ** | | |
| ಅ. | ತುಂತುರು ನೀರಾವರಿ | 1 | |
| ಆ | ಹನಿ ನೀರಾವರಿ | 2 | |
| ಇ | ಅಟೊಮೈಸೆಶನ್ (ಸ್ವಯಂ ಚಾಲಿತ) | 2 | |

ಗರಿಷ್ಠ ಅಂಕ : **5** ಪಡೆದ ಅಂಕ :

| ಕ್ರ. ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **5** | **ಬೀಜದ ಮೂಲ ಮತ್ತು ವರ್ಗ** | | |
| **ಅ.** | **ಆಧಿಕ ಇಳುವರಿಯ ತಳಿ/ಸಂಕರಣ ತಳಿಗಳ ಬಳಕೆ** | 1 | |
| ಆ | **ಪ್ರಮಾಣಿತ ಬಿತ್ತನೆ ಬೀಜಗಳ ಬಳಕೆ** | | |
| i | 10 ವರ್ಷಕ್ಕಿಂತ ಕಡಿಮೆ ಅವಧಿಯ ತಳಿಗಳ ಬಳಕೆ | 2 | |
| ii | 10 ವರ್ಷಕ್ಕಿಂತ ಹೆಚ್ಚಿನ ಅವಧಿಯ ತಳಿಗಳ ಬಳಕೆ | 1 | |
| ಇ | **ಬೀಜೋತ್ಪಾದನೆ/ಸಸ್ಯೋತ್ಪಾದನೆ ಮಾಡಿದಲ್ಲಿ** | 2 | |
| ಈ | **ಇತರೆ ಹೊಸ ಅನ್ವೇಷಣೆಗಳು (ಅಂಗಾಂಶ ಕೃಷಿ, ಕಸಿ ಪದ್ಧತಿ ಮತ್ತು ಇತರೆ)** | 2 | |

ಗರಿಷ್ಠ ಅಂಕ : **7** ಪಡೆದ ಅಂಕ :

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **6** | **ಮಣ್ಣು ಮತ್ತು ನೀರು ವಿಶ್ಲೇಷಣಾ ಚೀಟಿ ಹೊಂದಿರುವ ಕುರಿತು** | | |
| ಅ. | ಮಣ್ಣು ವಿಶ್ಲೇಷಣಾ ಚೀಟಿ ಹೊಂದಿದ್ದಲ್ಲಿ | 1 | |
| ಆ | ನೀರು ವಿಶ್ಲೇಷಣೆ ಚೀಟಿ ಹೊಂದಿದ್ದಲ್ಲಿ | 1 | |
| ಇ | ಮಣ್ಣು ವಿಶ್ಲೇಷಣಾ ಶಿಫಾರಸ್ಸು ಅಳವಡಿಸಿದ್ದಲ್ಲಿ | 2 | |

**ಗರಿಷ್ಠ ಅಂಕ : 4** **ಪಡೆದ ಅಂಕ :**

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **7** | **ಸಾವಯವ ಕೃಷಿ/ನೈಸರ್ಗಿಕ ಕೃಷಿ/ಸಮಗ್ರ ಪೋಷಕಾಂಶ ನಿರ್ವಹಣೆ** | | |
| ಅ | ಕೇವಲ ರಾಸಾಯಿನಿಕ ಗೊಬ್ಬರ ಬಳಕೆ ಮಾಡುತ್ತಿದ್ದಲ್ಲಿ | 0 | |
| ಆ | ರಾಸಾಯನಿಕ ಗೊಬ್ಬರದ ಜೊತೆ ಸಾವಯವ ಗೊಬ್ಬರ ಬಳಕೆ | 1 | |
| ಇ | ಸಾವಯವ ಗೊಬ್ಬರ ಬಳಕೆ ಮಾತ್ರ(ಎರೆಗೊಬ್ಬರ, ಸಗಣಿ, ನಗರ ಕಾಂಪೋಸ್ಟ್ ಇತ್ಯಾದಿ) | 2 | |
| **ಈ** | **ಹಸಿರೆಲೆ ಗೊಬ್ಬರ/ ಜೈವಿಕ ಗೊಬ್ಬರಗಳ ಬಳಕೆ** | **2** | |
| **ಉ** | **ಯಾವುದೇ ರೀತಿಯ ಗೊಬ್ಬರ ಬಳಸದೇ ಇರುವುದು(ನೈಸರ್ಗಿಕ ಕೃಷಿ)** | **2** | |

**ಗರಿಷ್ಠ ಅಂಕ : 7** **ಪಡೆದ ಅಂಕ :**

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **8** | **ಸಮಗ್ರ ಪೀಡೆ ನಿರ್ವಹಣೆ** | | |
| ಅ | ಕೀಟ/ರೋಗ ಭಾದೆ ಬಂದಾಗ ಶಿಫಾರಸ್ಸಿನಂತೆ ರಾಸಾಯನಿಕ ಬಳಸುವುದು | 1 | |
| ಆ | ಮುಂಜಾಗ್ರತೆಯಾಗಿ ಬೀಜೋಪಚಾರ ಕೈಗೊಳ್ಳುವುದು | 1 | |
| ಇ | ನೂತನ ವಿಧಾನಗಳ ಪೀಡೆ ನಿರ್ವಹಣೆ(ಸೋಲಾರ್ ಟ್ರ್ಯಾಪ್, ಜೇಡುಬೆಳೆ, ಮೊಹಕ ಬಲೆ ಇತ್ಯಾದಿ) | 1 | |
| ಈ | ಜೈವಿಕ ಪೀಡೆ ನಿರ್ವಹಣೆ | 1 | |
| ಉ | ಕಳೆ ನಿರ್ವಹಣೆ | 1 | |

**ಗರಿಷ್ಠ ಅಂಕ : 5** **ಪಡೆದ ಅಂಕ :**

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **9** | **ಮಳೆ ನೀರು ಕೊಯ್ಲು ರಚನಾತ್ಮಕ ಕ್ರಮಗಳ ಕುರಿತು(ಕೃಷಿ ಹೊಂಡ ಹಾಗೂ ಇತರೆ)** | | |
| ಅ | ಯಾವುದು ಇಲ್ಲ | 0 | |

| | | | |
|---|---|---|---|
| ಆ | ಸಹಾಯಧನ ಪಡೆದು ಭಾಗಶ: ಕ್ಷೇತ್ರಕ್ಕೆ ಅಳವಡಿಸಿರುವುದು | 1 | |
| ಇ | ಸಹಾಯಧನ ಪಡೆದು ಪೂರ್ಣ ಕ್ಷೇತ್ರಕ್ಕೆ ಅಳವಡಿಸಿರುವುದು | 2 | |
| ಈ | ಸಹಾಯಧನ ಪಡೆಯದೆ ಸ್ವಂತ ಮೂಲಗಳಿಂದ ರೈತರ ತಾಕಿನಲ್ಲಿ ಪೂರ್ಣ ಪ್ರಮಾಣದಲ್ಲಿ ಮಳೆ ನೀರು ಕೊಯ್ಲು ಅಳವಡಿಸಿರುವುದು | 3 | |

**ಗರಿಷ್ಠ ಅಂಕ :3 ಪಡೆದ ಅಂಕ :**

| ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **10** | **PM-KISAN, ಆಧಾರ್, ಬ್ಯಾಂಕ್ ಖಾತಾ ಇತರೇ ನೋಂದಣಿ ಕುರಿತು.** | | |
| ಅ | **ಅರ್ಜಿದಾರರು PM-KISAN ಯೋಜನೆಯಡಿ ಅರ್ಹತೆ ಹೊಂದಿದ್ದು** | | |
| i | ನೋಂದಾಣಿಯಾಗಿದ್ದಲ್ಲಿ | 1 | |
| ii | ನೋಂದಾಣಿಯಾಗಿಲ್ಲವಾದರೆ - | 0 | |
| ಆ | **ಅರ್ಜಿದಾರರ ಕುಟುಂಬದಲ್ಲಿರುವ ಸದಸ್ಯರು ಆಧಾರ್ ಪಡೆದಿರುವ ಕುರಿತು (ಕುಟುಂಬದಲ್ಲಿನ ಹೆಂಡತಿ, ಮಕ್ಕಳು ಸೇರಿದಂತೆ)** | | |
| i | ಪಡೆದಿದ್ದಲ್ಲಿ | 1 | |
| ii | ಕೆಲವರು ಮಾತ್ರ ಪಡೆದಿದ್ದಲ್ಲಿ | 1 | |
| iii | ಯಾರೂ ಪಡೆಯದಿದ್ದಲ್ಲಿ | 0 | |
| ಇ | **ಅರ್ಜಿದಾರ ರೈತರು ಬ್ಯಾಂಕಿನಲ್ಲಿ ಉಳಿತಾಯ ಖಾತೆ ಹೊಂದಿರುವ ಕುರಿತು** | | |
| i | ಹೊಂದಿದ್ದರೆ | 1 | |
| ii | ಇಲ್ಲವಾಗಿದ್ದಲ್ಲಿ | 0 | |
| ಈ | **ಅರ್ಜಿದಾರ ರೈತರು ಕಿಸಾನ್ ಕ್ರೆಡಿಟ್ ಕಾರ್ಡ್ ಹೊಂದಿರುವ ಕುರಿತು** | | |
| i | ಹೊಂದಿದ್ದರೆ | 1 | |
| ii | ಇಲ್ಲವಾಗಿದ್ದಲ್ಲಿ | 0 | |

**ಗರಿಷ್ಠ ಅಂಕ :5 ಪಡೆದ ಅಂಕ:**

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **11** | **ಕೃಷಿ ಕ್ಷೇತ್ರದ ಮಾಲೀಕತ್ವದ ಕುರಿತು** | | |
| ಅ | ಜೀವಂತವಾಗಿರುವ ಕುಟುಂಬದ(ಪತ್ನಿ/ಪತಿ)ಸದಸ್ಯರ ಜಂಟಿ ಮಾಲಿಕತ್ವ ಹೊಂದಿರುವುದರ ಕುರಿತು. | | |
| i | ಜಂಟಿ ಮಾಲಿಕತ್ವವಿದ್ದಲ್ಲಿ (ಪತಿ/ಪತ್ನಿ ಜಂಟಿಯಾಗಿರುವಂತೆ) | 1 | |
| ii | ಪತಿಯ ಹೆಸರಿನಲ್ಲಿದ್ದಲ್ಲಿ (ಅಂದರೆ ಜೀವಂತ ಪತ್ನಿ ಇದ್ದಾಗಲೂ) | 0 | |

**ಗರಿಷ್ಠ ಅಂಕ :1 ಪಡೆದ ಅಂಕ :**

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **12** | **ಕೃಷಿ ಯಾಂತ್ರೀಕರಣ ಕುರಿತು:** | | |
| ಅ | ಯಾವುದೇ ಉಪಕರಣಗಳನ್ನು ಹೊಂದಿಲ್ಲವಾದರೆ | 0 | |
| ಆ | ಕನಿಷ್ಟ ಕುಂಟೆ, ಕೂರಿಗೆ, ಚಾಪ್‌ಕಟರ್ ಇತ್ಯಾದಿ | 2 | |
| ಇ | ಕನಿಷ್ಟ ಮಿನಿಟ್ರಾಕ್ಟರ್, ಟ್ರಾಕ್ಟರ್ ಚಾಲಿತ ಎರಡು ಉಪಕರಣಗಳು ಇತ್ಯಾದಿ ಹೊಂದಿದ್ದರೆ | 2 | |
| ಈ | ರೈತರು ಸ್ವಂತ ಬುದ್ದಿವಂತಿಕೆಯಿಂದ ಹೊಸದಾಗಿ ಅನ್ವೇಷಣೆ ಮಾಡಿರುವ ಉಪಕರಣಗಳ ಕುರಿತು(ಪ್ರತಿಯೊಂದು ಉಪಕರಣಕ್ಕೆ 1 ರಂತೆ, ಗರಿಷ್ಟ 5 ಅಂಕಗಳನ್ನು ನೀಡುವುದು ಹಾಗೂ ಉಪಕರಣಗಳನ್ನು ಹೆಸರಿಸುವುದು) | 5 | |
| ಉ | ಹೊಸ ಅನ್ವೇಶಣೆಗಳು ಯಾವುದೂ ಇಲ್ಲವಾದಲ್ಲಿ | 0 | |

ಗರಿಷ್ಠ ಅಂಕ: 9 ಪಡೆದ ಅಂಕ :

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **13** | **ಮಣ್ಣು ಮತ್ತು ನೀರು ಸಂರಕ್ಷಣೆಯ ರಚನಾತ್ಮಕ ತಾಂತ್ರಿಕತೆಗಳು:** | | |
| ಅ | ಮಣ್ಣು ಸಂರಕ್ಷಣೆಗಾಗಿ ಕೈಗೊಂಡಿದ್ದಲ್ಲಿ (ಕನಿಷ್ಟ ಎರಡು ರಚನೆಗಳನ್ನು | 2 | |
| ಆ | ಮಳೆ ನೀರು ಸಂರಕ್ಷಣೆಗಾಗಿ ಕೈಗೊಂಡ ರಚನೆಗಳು (ಕನಿಷ್ಟ ಎರಡು ರಚನೆಗಳನ್ನು ಹೆಸರಿಸುವುದು) | 2 | |

ಗರಿಷ್ಠ ಅಂಕ :4 ಪಡೆದ ಅಂಕ :

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **14** | **ಇತರರಿಗೆ ಮಾದರಿ ರೈತನಾಗಿರುವ ಕುರಿತು** | | |
| ಅ | ರೈತರ ತಾಕಿಗೆ ಬೇರೆ ಗ್ರಾಮಗಳಿಂದ ರೈತರು ವಾರದಲ್ಲಿ ಒಂದು ಬಾರಿಯಾದರೂ ಭೇಟಿ ನೀಡುವರೆ? | | |
| i | ನೀಡುತ್ತಿದ್ದರೆ | 1 | |
| ii | ಇಲ್ಲವಾದಲ್ಲಿ | 0 | |
| ಆ | ರೈತರ ತಾಕಿನಲ್ಲಿ ಬೀಜಗಳ ಕುರಿತು, ಸಾವಯವ, ಜೈವಿಕ ಗೊಬ್ಬರಗಳು, ಬಯೋಡೈಜೆಸ್ಟರ್ ಘಟಕಗಳು ಇತ್ಯಾದಿ ಸುಸ್ಥಿತಿಯಲ್ಲಿದ್ದು ಇತರರಿಗೆ ಅರ್ಜಿದಾರರು ಮಾಹಿತಿಯನ್ನು ಭೇಟಿ ಸಂದರ್ಭದಲ್ಲಿ ನೀಡುತ್ತಿರುವ ಕುರಿತು | | |
| i | ನೀಡುತ್ತಿದ್ದರೆ | 1 | |

| | | | |
|---|---|---|---|
| ii | ಇಲ್ಲವಾದಲ್ಲಿ | 0 | |
| ಇ | ತಾಕು ಸಂಪೂರ್ಣ ಸುಸ್ಥಿರತೆಯಿದ್ದು ಸಮಗ್ರ ಕೃಷಿ ಪದ್ಧತಿಯನ್ನು ಹಾಗೂ ವರ್ಷಪೂರ್ತಿ ಒಂದಿಲ್ಲೊಂದು ಬೆಳೆ, ತರಕಾರಿ,ಯಾಂತ್ರೀಕರಣ,ಸಂಸ್ಕರಣೆ ಇತ್ಯಾದಿ ಕಂಡುಬರುತ್ತಿರುವುದು | | |
| i | ಕಂಡುಬರುತ್ತಿದ್ದಲ್ಲಿ | 1 | |
| ii | ಇಲ್ಲವಾದಲ್ಲಿ | 0 | |

**ಗರಿಷ್ಠ ಅಂಕ :3 ಪಡೆದ ಅಂಕ :**

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **15** | **ಕೊಯ್ಲೋತ್ತರ ತಂತ್ರಜ್ಞಾನ (ವರ್ಗೀಕರಣ, ಮಾರುಕಟ್ಟೆ, ಮೌಲ್ಯವರ್ಧನ** | | |
| ಅ | ಉತ್ಪನ್ನಗಳನ್ನು ವರ್ಗೀಕರಣ ಮಾಡಿ ಮಾರುಕಟ್ಟೆಗೆ ಕೊಂಡೊಯ್ದಲ್ಲಿ | 1 | |
| ಆ | ಉತ್ಪನ್ನಗಳನ್ನು ಮೌಲ್ಯವರ್ಧನೆ ಮಾಡಿ ಮಾರುಕಟ್ಟೆಗೆ ಕೊಂಡೊಯ್ದಲ್ಲಿ | 1 | |
| ಇ | ಉತ್ಪನ್ನಗಳನ್ನು ಸಂಸ್ಕರಣೆ ಮಾಡಿ ಮಾರುಕಟ್ಟೆಗೆ ಕೊಂಡೊಯ್ದಲ್ಲಿ | 1 | |
| ಈ | ಉತ್ಪನ್ನಗಳನ್ನು ತಮ್ಮದೆ ಬ್ಯಾಂಡಿಂಗ್ ಮಾಡಿ ಮಾರುಕಟ್ಟೆಗೆ ಕೊಂಡೊಯ್ದಲ್ಲಿ | 1 | |
| ಉ | ಆನ್ ಲೈನ್/ಸಾಮಜಿಕ ಮಾಧ್ಯಮ ಬಳಸಿ ಉತ್ಪನ್ನ ಮಾರಾಟ ಮಾಡಿರುವುದು. | 1 | |
| ವಿ.ಸೂ.:ಮೇಲಿನ ಅಂಶಗಳಿಗೆ ಗರಿಷ್ಠ 4 ಅಂಕಗಳನ್ನು ಮಾತ್ರ ಪರಿಗಣಿಸುವುದು. | | | |

**ಗರಿಷ್ಠ ಅಂಕ :4 ಪಡೆದ ಅಂಕ**

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **16** | **ಕೃಷಿಯಲ್ಲಿ ಸೌರಶಕ್ತಿ ಅಳವಡಿಕೆ** | | |
| i | ಅಳವಡಿಸಿದ್ದಲ್ಲಿ | 1 | |
| ii | ಇಲ್ಲವಾದಲ್ಲಿ | 0 | |

**ಗರಿಷ್ಠ ಅಂಕ :1 ಪಡೆದ ಅಂಕ :**

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **17** | **ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸುವಿಕೆ** | | |
| ಅ | ದೂರದರ್ಶನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಲ್ಲಿ | 1 | |
| ಆ | ಆಕಾಶವಾಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಲ್ಲಿ | 1 | |

| | | | |
|---|---|---|---|
| ಇ | ಪತ್ರಿಕೆಗಳಲ್ಲಿ ಸಾಧನೆಗಳ ಬಗ್ಗೆ ಪ್ರಕಟವಾದಲ್ಲಿ | 1 | |
| ಈ | ರೈತರು ಪತ್ರಿಕೆಗಳಲ್ಲಿ ಕೃಷಿ ಸಂಬಂದಿತ ಲೇಖನಗಳನ್ನು ಪ್ರಕಟಿಸಿದ್ದಲ್ಲಿ | 1 | |
| ಉ | ಕೃಷಿ ವಿಶ್ವವಿದ್ಯಾಲಯ/ ಇಲಾಖಾ ತರಬೇತಿಗಳಲ್ಲಿ ಬಾಗವಹಿಸುವಿಕೆ | 1 | |

ಗರಿಷ್ಠ ಅಂಕ :5 ಪಡೆದ ಅಂಕ :

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **18** | **ರೈತ ಉತ್ಪಾಧಕರ ಸಂಸ್ಥೆ** | | |
| ಅ | ಸದಸ್ಯನಾಗಿದ್ದರೆ | 1 | |
| ಆ | ಇಲ್ಲದಿದ್ದಲ್ಲಿ | 0 | |

ಗರಿಷ್ಠ ಅಂಕ :1 ಪಡೆದ ಅಂಕ :

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **19** | **ಕಳೆದ ಐದು ಸಾಲೂಗಳಲ್ಲಿ ಬೆಳೆ ವಿಮೆ ನೋಂದಾಯಿಸಿದಲ್ಲಿ** | | |
| ಅ | ಬೆಳೆ ವಿಮೆ ಹೊಂದಿರದಿದ್ದಲ್ಲಿ | 0 | |
| ಆ | ಪ್ರತಿ ವರ್ಷ ಹೊಂದಿದ್ದರೆ (ವರ್ಷಕ್ಕೆ ಒಂದು ಅಂಕದಂತೆ ಗರಿಷ್ಠ 5) | 5 | |

ಗರಿಷ್ಠ ಅಂಕ :5 ಪಡೆದ ಅಂಕ :

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **20** | **ಕಳೆದ ಮೂರು ಸಾಲೂಗಳಲ್ಲಿ ಬೆಳೆ ಉತ್ಪಾದಕತೆಯಲ್ಲಿ ಪಡೆದ ಪ್ರಶಸ್ತಿಗಳ ಕುರಿತು** | | |
| ಅ | ಪ್ರತಿ ಬೆಳೆವಾರು ಕಳೆದ ಮೂರು ವರ್ಷಗಳಲ್ಲಿ ಕೃ.ವಿ.ವಿ/ರಾಜ್ಯ ಸರ್ಕಾರದ ಮಟ್ಟದಲ್ಲಿ ಬರುವ ಪ್ರಥಮ/ದ್ವಿತೀಯ/ತೃತೀಯ ಪ್ರಶಸ್ತಿಗಳಡಿಯಲ್ಲಿ ಯಾವುದಾದರು ಪ್ರಶಸ್ತಿಗಳು ಯಾವುದೇ ಬೆಳೆಯಲ್ಲಿ ಪಡೆದಿದ್ದರೆ: | 3 | |

ಗರಿಷ್ಠ ಅಂಕ :3 ಪಡೆದ ಅಂಕ :

| ಕ್ರ.ಸಂ | ವಿಷಯ | ನಿಗದಿಪಡಿಸಿರುವ ಅಂಕಗಳು | ಪಡೆದ ಅಂಕಗಳು |
|---|---|---|---|
| **21** | **ದಾಖಲಾತಿಗಳ ನಿರ್ವಹಣೆ** | | |
| ಅ | ನಿರ್ವಹಿಸಿದ್ದಲ್ಲಿ | 1 | |
| ಆ | ಇಲ್ಲದಿದ್ದಲ್ಲಿ | 0 | |

ಗರಿಷ್ಠ ಅಂಕ :1 ಪಡೆದ ಅಂಕ :

| ಕ್ರ.ಸಂ | ವಿಷಯ |
|---|---|
| **22** | **ಇತರೆ ಕೃಷಿ ಅನ್ವೇಶಣೆಗಳು : (ರೈತರ ಸಾಧನೆ, ವಿಭಿನ್ನತೆ, ವಿಶಿಷ್ಟತೆ ಇತ್ಯಾದಿ) ಇದ್ದಲ್ಲಿ** |
| ಷರಾ: ಪರಿಶೀಲನಾ ಕಾರ್ಯತಂಡದ ಸದಸ್ಯರು 3 ಅಥವಾ 4 ವಾಕ್ಯಗಳಲ್ಲಿ ದಾಖಲಿಸುವುದು. | |

**ಗರಿಷ್ಠ ಅಂಕ :5 ಪಡೆದ ಅಂಕ :**

| **ಒಟ್ಟು ಅಂಕಗಳು: 100** | **ಒಟ್ಟು ಪಡೆದ ಅಂಕಗಳು:** |
|---|---|

**ಮೇಲಿನ ಅಂಶಗಳಿಗೆ ನಮೂದಿಸಲಾಗಿರುವ ಮೌಲ್ಯಮಾಪನದ ಅಂಕಗಳನ್ನು**

**"ದೃಢೀಕರಿಸಲಾಗಿದೆ"**

| ರೈತರ ಸಹಿ, ಹೆಸರು & ವಿಳಾಸ | ಆತ್ಮ ಅಧಿಕಾರಿಯ ಸಹಿ, ಹೆಸರು & ವಿಳಾಸ | ಕೃ.ವಿ.ವಿ.ವಿಜ್ಞಾನಿಗಳ ಸಹಿ ಹೆಸರು & ವಿಳಾಸ | ತಂಡದ ಮುಖ್ಯಸ್ಥರ ಸಹಿ ಹೆಸರು & ವಿಳಾಸ |
|---|---|---|---|